



ನ್ಯಾಯಾಧೀಶರು ಕುಡುಕನೊಬ್ಬನನ್ನು ಹಿಡಿದು ಖಟ್ಲೆ ಹಾಕಿದ ಪೊಲೀಸನಿಗೆ ಪ್ರಶ್ನಿಸಿದರು: ಇವನು ಕುಡಿದಿದ್ದ ಎಂಬುದು ನಿನಗೆ ಹೇಗೆ ಗೊತ್ತಾಯಿತು?

ಪೊಲೀಸ್: ಇವನು ರಸ್ತೆಯಲ್ಲಿ ಒಬ್ಬ ರಿಕ್ಷಾದವನೊಡನೆ ತುಂಬಾ ಜಗಳವಾಡುತ್ತಿದ್ದ.

ಜಡ್ಜ್: ಜಗಳವಾಡಿದ ಅಂದ ಮಾತ್ರಕ್ಕೆ ಕುಡಿದಿದ್ದ ಎಂದು ಹೇಗೆ ಸಾಬೀತು ಮಾಡುವಿ?

ಪೊಲೀಸ್: ಆ ಜಗಳಾನೇ ಅವನು ಕುಡಿದಿದ್ದ ಎನ್ನುವುದನ್ನು ಸಾಬೀತು ಮಾಡುತ್ತದೆ ಸ್ವಾಮಿ. ಏಕೆಂದರೆ ಇವನು ಜಗಳ ಮಾಡುತ್ತಿದ್ದ ಸ್ಥಳದಲ್ಲಿ ರಿಕ್ಷಾನೂ ಇರಲಿಲ್ಲ, ರಿಕ್ಷಾವಾಲಾನೂ ಇರಲಿಲ್ಲ!

★★★

ಒಂದು ಕಟ್ಟಡದಿಂದ ಖ್ಯಾತ ಸಾಹಿತಿ ಬರ್ನಾರ್ಡ್ ಷಾ ಅವರು ಮೆಟ್ಟಿಲು ಇಳಿದು ಬರುತ್ತಿದ್ದರೆ, ಆಗಲೇ ಚೆಸ್ಟರ್‌ಸನ್ ಮೆಟ್ಟಿಲು ಹತ್ತಿ ಹೋಗುತ್ತಿದ್ದರು! ಅಲ್ಲಿ ಒಬ್ಬರಿಗೆ ಹೋಗುವಷ್ಟು ಮಾತ್ರ ಸ್ಥಳಾವಕಾಶವಿತ್ತು. ಚೆಸ್ಟರ್‌ಸನ್ ಅವರು ಚೇಷ್ಟೆಯಿಂದ ಬರ್ನಾರ್ಡ್ ಷಾರನ್ನು ನೋಡಿ, 'ನಾನು ಮೂರ್ಖರಿಗೆ ಜಾಗ ಬಿಡುವುದಿಲ್ಲ' ಎಂದರು.

ತಕ್ಷಣ ಬರ್ನಾರ್ಡ್ ಷಾ, 'ಆದರೆ ನಾನು ಬಿಡುತ್ತೇನೆ' ಎಂದು ಮುಗುಳ್ನಕ್ಕು ಪಕ್ಕಕ್ಕೆ ಸರಿದು ನಿಂತರು.

★★★

ಒಬ್ಬ ಹುಡುಗಿ ಜೋತಿಷಿ ಬಳಿಗೆ ಹೋಗಿ ತನ್ನನ್ನು ವರಿಸಲು ಬಂದ ಹುಡುಗನ ಜಾತಕ ಕೊಟ್ಟು ಅವನ ಹಿಂದಿನ ಹಾಗೂ ವರ್ತಮಾನ ಸ್ಥಿತಿಗಳ ಬಗ್ಗೆ ಹೇಳಲು ವಿನಂತಿಸಿದಳು.

ಜೋತಿಷಿ: ಹಿಂದಿನ ಹಾಗೂ ಇಂದಿನ ಸ್ಥಿತಿಗಳ ಬಗ್ಗೆ ಮಾತ್ರ ಹೇಳಿದರೆ ಸಾಕೆ? ಭವಿಷ್ಯದ ಬಗ್ಗೆ ಬೇಡವೇ?

ಹುಡುಗಿ: ಭವಿಷ್ಯ ಬೇಡ. ಅವನ ಭವಿಷ್ಯವೆಲ್ಲ ನನ್ನ ಕೈಯಲ್ಲೇ ಇರುತ್ತದೆ.

★★★

ಗೆಳೆಯ: ನಿನ್ನ ಹೆಂಡತಿ ನರ್ಸಿಂಗ್ ಪರೀಕ್ಷೆ ಪಾಸಾದಳಂತಲ್ಲ. ಚೆನ್ನಾಯ್ತು ಬಿಡು. ಡಾಕ್ಟರನಾದ ನಿನಗೆ ನಿನ್ನವಳೇ ನರ್ಸ್ ಸಿಕ್ಕಂತಾಯ್ತು. ಸಂತೋಷವಲ್ಲವೇ?

ಡಾಕ್ಟರ್: ಏನು ಸಂತೋಷ ಬಂತು! ನನಗೆ ದುಃಖವೇ ಆಗಿದೆ.

ಗೆಳೆಯ: ಏಕೆ?

ಡಾಕ್ಟರ್: ಏಕೆಂದರೆ, ನನ್ನ ಹೆಂಡತಿಯನ್ನೇ ನಾನು ಸಿಸ್ಟರ್ ಎಂದು ಕರೆಯಬೇಕಲ್ಲ!

★★★

ಅಮೆರಿಕದ ಪ್ರಸಿದ್ಧ ಲೇಖಕ ಮಾರ್ಕ್ ಟ್ವೈನ್‌ರು ತಮ್ಮ ಮಿತ್ರನ ಮನೆಗೆ ಹೋಗಿ ಒಂದು ಪುಸ್ತಕವನ್ನು ಕೇಳಿದರು. ಆತ 'ಇಲ್ಲೇ ಇದನ್ನು ಉಪಯೋಗಿಸಬೇಕು. ಬೇರೆಡೆಗೆ ಒಯ್ಯುವಂತಿಲ್ಲ' ಎಂದ!

ಟ್ವೈನ್ ಅಲ್ಲೇ ಕುಳಿತು ಪುಸ್ತಕ ಓದಿ ಬಂದರು.

ಮರುದಿನ ಅದೇ ಮಿತ್ರ ಮಾರ್ಕ್‌ಟ್ವೈನ್‌ರಲ್ಲಿಗೆ ಹುಲ್ಲು ಕತ್ತರಿಸುವ ಕತ್ತರಿ ಬೇಕೆಂದು ಕೇಳಲು ಬಂದ.

ಮಾರ್ಕ್‌ಟ್ವೈನರು, 'ಇಲ್ಲೇ ಇದನ್ನು ಉಪಯೋಗಿಸತಕ್ಕದ್ದು. ಬೇರೆಡೆಗೆ ಒಯ್ಯುವಂತಿಲ್ಲ' ಎಂದರು!

**(ಸಂಗ್ರಹ): ಸಿದ್ದೇಶ್ ಸಣ್ಣಗಿರಿ ಕೊಟ್ಟೂರು**

ಸಂದರ್ಶಕ: ಸಾರ್ ನೀವು ಅಧ್ಯಾಪಕ ವೃತ್ತಿಗೆ ಸೇರಲು ಎರಡು ಪ್ರಮುಖ ಕಾರಣಗಳನ್ನು ತಿಳಿಸಬಲ್ಲಿರಾ?

ಗುಂಡ: ದಸರಾ ಮತ್ತು ಬೇಸಿಗೆ ರಜಾಗಳು.

★★★



ಹೆಂಡತಿ: ರೀ ನೀವು ಟಾಯ್ಲೆಟ್‌ಗೆ ಹೋಗಿದ್ದಾಗ ಟ್ರಾನ್ಸಿಸ್ಟರ್ ತಗೊಂಡು ಹೋಗಿದ್ರ?

ಗುಂಡ: ಹೌದು ತಗೊಂಡು ಹೋಗಿದ್ದೆ. ಯಾಕೆ ಕೇಳ್ತಾ ಇದೀಯಾ?

ಹೆಂಡತಿ: ಹಾಡುಗಳು ಚೆನ್ನಾಗಿತ್ತಾ?

ಗುಂಡ: ರಾಷ್ಟ್ರಗೀತೆ ಹಾಕಿದ್ರು ಕಣೇ ನಿಂತ್ಕೊಂಡೇ ಮಾಡ್ದೆ.

★★★

ರಾಣಿ: ರೀ ನಿಮಗೆ ರಾಣಿ ಅನ್ನೋ ಮೊದಲನೇ ಹೆಂಡತಿ ಇದ್ದಳೂಂತ ನನಗೆ ಮದುವೆಗೆ ಮುಂಚೆ ಯಾಕೆ ಹೇಳಲಿಲ್ಲ?

ಗುಂಡ: ಹೇಳಿದೆನಲ್ಲ ಚಿನ್ನಾ.

ರಾಣಿ: ಎಲ್ಲಿ ಹೇಳಿದ್ರಿ?

ಗುಂಡ: ನಿನ್ನ ರಾಣಿ ಹಾಗೆ ನೋಡ್ಕೋತೀನೀಂತ ಹೇಳಿದ್ದೆನಲ್ಲ.

★★★


ಕಂಪೆನಿ ಮಾಲೀಕ: ಮ್ಯಾನೇಜರ್, ನಿನಗೆ ಏನಾದರೂ ಹೇಳಿದ್ದನಾ?

ಕೆಲಸಗಾರ: ಹೌದು ಸಾರ್! ನೀವು ಬಂದ ತಕ್ಷಣ ಅವರನ್ನು ಎಬ್ಬಿಸಲು ಹೇಳಿದ್ದಾರೆ.

**(ಸಂಗ್ರಹ):ಎಂ.ಕೆ.ಮಂಜುನಾಥ್, ಬೆಂಗಳೂರು**



ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265
ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೇದನ ಮುಂತಾದ
ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.
ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.
ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.
ನಿಮ್ಮ ಸಮಸ್ಯಗಳನ್ನು ಗುಪ್ತವಾಗಿ ಇಡಲಾಗುವುದು.
ಆಫೀಸ: ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ ಎಫ್ 13, ಹೊಟೇಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.
ಮನೆ: ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.
0836-2282265
E-mail: mbjoshiastro@gmail.com